# ಸುಂದರ ಕೈಬರಹದ ಕಿಶೋರಿ!

■ ಪ್ರವೀಣ ಕುಲಕರ್ಣಿ



ನೀವು ಕೈಬರಹದಲ್ಲಿ ಏನನ್ನಾದರೂ ಬರೆದು ಎಷ್ಟು ದಿನಗಳಾಗಿವೆ? ತಲೆ ಕೆರೆದುಕೊಂಡರೂ ಉತ್ತರ ಹೊಳೆಯುತ್ತಿಲ್ಲ, ಅಲ್ಲವೇ? ಈಗಿನ ಈ ಡಿಜಿಟಲ್ ಯುಗದಲ್ಲಿ ಲ್ಯಾಪ್‌ಟಾಪ್ ಬಂದಮೇಲೆ, ಮೊಬೈಲ್ ಬಳಕೆ ಹೆಚ್ಚಿದ ಮೇಲೆ ಕೈಬರಹದ ಸಂಸ್ಕೃತಿಯೇ ಮರೆಯಾಗುತ್ತ ಹೊರಟಿದೆ. ನೇರವಾಗಿ ಟೈಪ್ ಮಾಡುವ ಪ್ರವೃತ್ತಿಯೇ ಹೆಚ್ಚಾಗುತ್ತಿದೆ. ಆದರೆ, ನೇಪಾಳದ ಈ ಹುಡುಗಿ ಜಗತ್ತಿನಲ್ಲೇ ಅತ್ಯಂತ ಸುಂದರ ಕೈಬರಹಕ್ಕೆ ಹೆಸರುವಾಸಿಯಾಗಿದ್ದು, ವಿದ್ಯಾರ್ಥಿಗಳ ಪಾಲಿಗೆ ಸ್ಫೂರ್ತಿಯ ಸೆಲೆಯಾಗಿದ್ದಾಳೆ.

ಹೌದು, ಚಂದದ ಕೈಬರಹದಿಂದಾಗಿ ಶಿಕ್ಷಣಕ್ಕೆ ಒಂದು ಅವರ್ಣನೀಯ ಸೊಬಗು ಬರುತ್ತದೆ. ‘ನಿಮ್ಮ ಬರವಣಿಗೆ ನಿಮ್ಮ ವ್ಯಕ್ತಿತ್ವದ ಪ್ರತಿಬಿಂಬ’ ಎಂದು, ಹಿಂದಿನ ದಿನಗಳಲ್ಲಿ, ಗುರುಗಳು ಹೇಳುತ್ತಿದ್ದರು. ‘ನಾವು ಬರೆಯುವಾಗ ಮೆದುಳಿನಲ್ಲಿ ಮೂಡುವ ಯೋಚನೆಗಳಿಗೂ ಬೆರಳ ತುದಿಯಿಂದ ಒಡಮೂಡುವ ಪದಗಳಿಗೂ ನೇರ ಸಂಬಂಧ ಇರುತ್ತದೆ. ಹೀಗಾಗಿ ಭಾವನೆಗಳು ಸಶಕ್ತವಾಗಿ ವ್ಯಕ್ತವಾಗುತ್ತವೆ, ಅಕ್ಷರರೂಪದಲ್ಲಿ ಜೀವ ಪಡೆಯುತ್ತವೆ’ ಎಂದೂ ವಿವರಿಸುತ್ತಿದ್ದರು. ಹಿಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಶುದ್ಧಬರಹದ ‘ಹೋಂವರ್ಕ್’ ಇದ್ದೇ ಇರುತ್ತಿತ್ತು. ಪ್ರಾಯಶಃ ಈಗ ಯಾವ ಶಾಲೆಯಲ್ಲೂ ಇಂತಹ ಪರಿಪಾಟ ಇದ್ದಂತಿಲ್ಲ. ಸುಂದರವಾಗಿ ಕಾಣುವಂತೆ ಕೈಬರಹವನ್ನು ಬರೆಯುವ ‘ಲೇಖನಿ ಕೌಶಲ’ ರಾತ್ರಿ ಬೆಳಗಾಗುವಷ್ಟರಲ್ಲಿ ಸಿದ್ಧಿಸುವ ವಿದ್ಯೆಯಲ್ಲ. ಅದಕ್ಕೆ ವರ್ಷಗಟ್ಟಲೆ ಅಭ್ಯಾಸ ಬೇಕು. ಹಾಗೆ ಅಭ್ಯಾಸ ಮಾಡಿದ ನೇಪಾಳದ ಗುಡ್ಡಗಾಡಿನ ಹುಡುಗಿ ಪ್ರಕೃತಿ ಮಲ್ಲ, ಈಗ ಜಗತ್ತಿನಲ್ಲೇ ಅತ್ಯಂತ ಸುಂದರ ಕೈಬರಹ ಹೊಂದಿದ ದಾಖಲೆ ಬರೆದಿದ್ದಾಳೆ.

ಪ್ರಕೃತಿ, ಎಂಟನೇ ತರಗತಿಯಲ್ಲಿ ಓದುತ್ತಿದ್ದಾಗ ಅವಳ ಮೇಷ್ಟ್ರು ಕೊಟ್ಟ ಅಸೈನ್‌ಮೆಂಟ್‌ಅನ್ನು ಪೂರ್ಣಗೊಳಿಸಿ ಸಲ್ಲಿಸಿದ್ದಳು. ಆ ಅಸೈನ್‌ಮೆಂಟ್‌ನ ಪ್ರಬಂಧವನ್ನು ಅವಳೇ ಕೈಬರಹದಲ್ಲಿ ಬರೆದು ತಂದಿದ್ದಳು. ಅದು, ಅಂತರ್ಜಾಲದಲ್ಲಿ ಜಗತ್ತಿನಾದ್ಯಂತ ಹರಿದಾಡಿ, ‘ಈ ಕೈಬರಹ ಪ್ರಿಂಟ್ ಹೊಡೆದಂತೆ ಇದೆ’ ಎಂಬ ಮೆಚ್ಚುಗೆಗೆ ಪಾತ್ರವಾಯಿತು. ಕೈಬರಹವೋ, ಟೈಪ್ ಮಾಡಿದ ಅಕ್ಷರವೋ ಎಂದು ಕಂಡು ಹಿಡಿಯಲಾಗದಷ್ಟು ಬರವಣಿಗೆ ಮುದ್ದಾಗಿದೆ ಎಂದು ಹಲವರು ಮನದುಂಬಿ ಹೊಗಳಿದರು. ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ಒಕ್ಕೂಟ ರಚನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಕೃತಿ ತನ್ನ ಕೈಬರಹದಲ್ಲಿ ಶುಭಾಶಯ ಪತ್ರವೊಂದನ್ನು ಬರೆದಳು. ಅದು ಕೂಡ ಅಚ್ಚು ಹಾಕಿಸಿದಂತಿತ್ತು. ಯುಎಇ ರಾಯಭಾರಿ ಕಚೇರಿಯ ಅಧಿಕಾರಿಗಳು ಅವಳನ್ನು ಪ್ರೀತಿಯಿಂದ ಸನ್ಮಾನಿಸಿದರು.

ಸುಂದರ ಕೈಬರಹದ ಸಿದ್ಧಿಯೇನೂ ಸಣ್ಣ ಸಾಧನೆಯಲ್ಲ. ಅದೊಂದು ಕುಸುರಿ ಕಲೆ. ಎಲ್ಲ ಅಕ್ಷರಗಳ ಗಾತ್ರ ಒಂದೇ ಸ್ವರೂಪದ್ದಾಗಿರಬೇಕು. ಒಂದೇ ಪಂಕ್ತಿಯಲ್ಲಿ ಅವುಗಳ ಜೋಡಣೆ ಆಗಿರಬೇಕು. ಲಿಪಿಯಲ್ಲಿ ಆ ಸಹಜ ಹರಿವು, ಸಮ್ಮಿತಿ ಹಾಗೂ ಸ್ಪಷ್ಟತೆ ಎಲ್ಲವೂ ಇರಬೇಕು. ಅಂತಹ ಕೌಶಲವನ್ನು ಸಿದ್ಧಿಸಿಕೊಂಡ ಪ್ರಕೃತಿಯ ಬರಹ ಎಲ್ಲರ ಗಮನ ಸೆಳೆದಿದೆ. ಬರಹ ಶುದ್ಧಗೊಳ್ಳುವ ಹಿಂದೆ ದೊಡ್ಡ ಶ್ರಮ ಇದೆ. ಅದಕ್ಕೆ ವರ್ಷಗಟ್ಟಲೆ ಅಭ್ಯಾಸ ಬೇಕು. ಬರೆಯುವ ಪ್ರತಿ ಅಕ್ಷರದ ಕಡೆಗೆ ಲಕ್ಷ್ಯ ಇಡಬೇಕು. ಡಿಜಿಟಲ್ ಯುಗದ, ಅದೂ ನವಪೀಳಿಗೆಯ ಪ್ರಕೃತಿ, ಕೈಬರಹದ ಮೇಲೆ ಬೆಳೆಸಿಕೊಂಡ ಪ್ರೀತಿ ಬೆರಗು ಮೂಡಿಸುತ್ತದೆ. ಏಕೆಂದರೆ, ಇಂದಿನ ವಿದ್ಯಾರ್ಥಿಗಳಿಗೆ ಬರಹದ ಕುರಿತು ಅಷ್ಟಾಗಿ ಆಸಕ್ತಿಯೇ ಇಲ್ಲ. ಟೈಪ್ ಮಾಡುವ ಸುಲಭದ ಅವಕಾಶ ಬೆರಳ ತುದಿಯಲ್ಲಿ ಲಭ್ಯ ಇರುವಾಗ, ಬೆರಳು ಮಧ್ಯೆ ಪೆನ್ ಇಟ್ಟುಕೊಂಡು ಬರೆಯುವ ಕಷ್ಟ ಯಾರಿಗೆ ತಾನೇ ಬೇಕು? ಆದರೆ, ಒಳ್ಳೆಯ ಕೈಬರಹದ ಕೌಶಲವೊಂದು ಇತರ ಕೆಲವು ಜಾಣ್ಮೆಗಳನ್ನೂ ಜತೆಗೆ ಕರೆತರುತ್ತದೆ. ಬರೆಯುವಾಗ ಲಿಪಿಯ ಪ್ರತಿಯೊಂದು ವಿವರದ ಕಡೆಗೂ ಗಮನ ಇಡಬೇಕಲ್ಲ? ಸೃಜನಶೀಲವಾಗಿ ಯೋಚಿಸಲು, ಸ್ಮರಣಶಕ್ತಿ ಹೆಚ್ಚಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಹೀಗಾಗಿ ಸುಂದರ ಕೈಬರಹದ ಕೌಶಲ ಸಿದ್ಧಿಸಿದವರಿಗೆ ಶೈಕ್ಷಣಿಕವಾಗಿ ಸಾಧನೆ ಮೆರೆಯುವ ಕಲೆಯೂ ದಕ್ಕುತ್ತದೆ ಎಂದು ತಜ್ಞರು ಹೇಳುತ್ತಾರೆ.

ನೇಪಾಳದ ಪ್ರಖ್ಯಾತ ಬಿರೇಂದ್ರ ಸೈನಿಕ್ ಆವಾಸಿಯಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯಾಗಿದ್ದ ಪ್ರಕೃತಿ, ಮೊದಲು ನೇಪಾಳದಲ್ಲೇ ಅತ್ಯುತ್ತಮ ಹಾಗೂ ಸುಂದರ ಕೈಬರಹವುಳ್ಳ ವ್ಯಕ್ತಿಯಾಗಿ ಹೊರಹೊಮ್ಮಿದ್ದಳು. ಮುಂದೆ ಜಗತ್ತಿನ ತುಂಬಾ ಹೆಸರು ಗಳಿಸಿದಳು. ಅವಳು ಬರೆಯುವ ಇಂಗ್ಲಿಷ್ ಅಕ್ಷರಗಳಂತೂ ಮೊಳೆ ಜೋಡಿಸಿ ಅಚ್ಚು ಹಾಕಿಸಿದಂತೆ ಇರುತ್ತವೆ. ನೇಪಾಳದ ಹಲವು ಶಾಲೆಗಳ ಮಕ್ಕಳು ಅವಳನ್ನು ಭೇಟಿಯಾಗಿ, ಆಕೆ ಈ ಕೌಶಲ ಪಡೆದಿದ್ದು ಹೇಗೆ ಎಂದು ಪಾಠ ಮಾಡಿಸಿಕೊಂಡು ಹೋಗಿದ್ದಾರೆ. ಅಲ್ಲಿನ ಸಂಸ್ಕೃತಿ ಇಲಾಖೆಯು ದೇಶಕ್ಕೆ ಹೆಮ್ಮೆ ತಂದ ವ್ಯಕ್ತಿಗಳ ಸರಣಿಯಲ್ಲಿ ಪ್ರಕೃತಿಯ ಪರಿಚಯವನ್ನೂ ಮಾಡಿಕೊಟ್ಟಿದೆ. ಅವಳೀಗ ಬರವಣಿಗೆ ಪ್ರಿಯರ ಕಣ್ಮಣಿಯೇ ಆಗಿಬಿಟ್ಟಿದ್ದಾಳೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65